# ಗುಲಾಬಿಯ ಗರ್ವಭಂಗ!



ಚಿತ್ರ: ಶಿಲ್ಪಾ ಕಬ್ಬಿನಕಂತಿ

ಪಟ್ಟಣದ ಕೇಂದ್ರ ಭಾಗದಲ್ಲಿರುವ ಪಾರ್ಕಿನಲ್ಲಿ ಹಲವಾರು ಅಲಂಕಾರಿಕ, ಔಷಧೀಯ ಗಿಡಗಳಿದ್ದವು. ಮಲ್ಲಿಗೆ, ಗುಲಾಬಿ, ಅಸ್ಟರ್ಡ, ಗೈಲಾರ್ಡಿಯ, ಎಂಥೂರಿಯಂ ಎಂಬ ಸುಂದರ ಗಿಡಗಳೂ, ಕ್ಯಾಕ್ಟಸ್‌ನಂಥ ಕಳ್ಳಿಗಿಡಗಳೂ ಇದ್ದವು. ದಿನವೂ ನೀರು ಹಾಯಿಸುತ್ತಿದ್ದುದರಿಂದ ಹಸಿರಾಗಿ ನಳ ನಳಿಸುತ್ತಿದ್ದವು. ಗುಲಾಬಿ ಗಿಡದ ಪಕ್ಕದಲ್ಲೇ ಕಳ್ಳಿಯನ್ನೂ ಬೆಳೆಸಲಾಗಿತ್ತು. ಇದು ಗಲಾಬಿ ಗಿಡಕ್ಕೆ ಇರುಸು ಮುರುಸಾಗಿತ್ತು. 'ನನ್ನಂಥ ಸುಂದರಾಂಗಿಯ ಪಕ್ಕದಲ್ಲಿ ಇದೇನು ಕಳ್ಳಿಗಿಡ?' ಎಂದು ಮುಖವನ್ನು ಸಿಂಡರಿಸಿಕೊಂಡಿರುತ್ತಿತ್ತು. ಕಳ್ಳಿಗಿಡ ಮೆದುವಾಗಿ ಗುಲಾಬಿಯಕ್ಕ, ಹಾಗೆಲ್ಲ ಗರ್ವ ಪಡಬೇಡ. ಎಲ್ಲರಿಗೂ ಒಂದು ಕಾಲ ಬರುತ್ತದೆ. ನಿನ್ನ ಪಕ್ಕದಲ್ಲಿರುವುದಕ್ಕೆ ನನಗೂ ಸಂತಸವೇ. ಆದರೆ ನೀನು ಹೀಯಾಳಿಸಿದಾಗ ಬೇಜಾರಾಗ್ತದೆ' ಎಂದು ಹೇಳುತ್ತಿತ್ತು. ದಿನವೂ ಗುಲಾಬಿ ಒಂದಿಲ್ಲೊಂದು ನೆಪ ಹುಡುಕಿ ಕಳ್ಳಿಯನ್ನು ಹೀಯಾಳಿಸುತ್ತಲೇ ಇತ್ತು. ಹೀಗೆ ಹಲವು ವರ್ಷಗಳು ಕಳೆದವು.

ಆ ನಾಡಿಗೆ ಬರ ಬಿತ್ತು. ನೀರಿನ ಮೂಲಗಳು ಬತ್ತತೊಡಗಿದವು. ಪಾರ್ಕಿನ ಗಿಡಗಳಿಗೆ ನೀರುಣಿಸುವುದು ಸ್ಥಗಿತಗೊಂಡಿತು. ಗುಲಾಬಿ ಗಿಡ ದಿನ ದಿನಕ್ಕೆ ಬಾಡತೊಡಗಿತು. ಬಿಸಿಲಲ್ಲಿ ನೀರಿಲ್ಲದೇ ಉಸಿರುಕಟ್ಟಿದಂತಾಗಿಮೂರ್ಛೆ ಬರುವಂತಾಯಿತು. ಕಳ್ಳಿಗಿಡ ಮೊದಲೇ ಮರುಭೂಮಿ ಸಸ್ಯ ಅದಕ್ಕೆ ನೀರು ಕಡಿಮೆಯಾದರೂ ನಳ ನಳಿಸುತ್ತಿತ್ತು. ಗುಲಾಬಿ ಗಿಡಕ್ಕೆ ಸೋಜಿಗವಾಯಿತು. ಇದಕ್ಕೆ ಬರಗಾಲದ ಪರಿಣಾಮವೇ ಆಗಿಲ್ಲವಲ್ಲ ಎಂದು ಆ ಗಿಡವನ್ನೇ ವೀಕ್ಷಿಸುತ್ತಿತ್ತು.

ಒಂದು ಮುಂಜಾನೆ ಬುಲ್ ಬುಲ್ ಪಕ್ಷಿಯೊಂದು ಚುಂಚಿನಿಂದ ಕಳ್ಳಿಗಿಡದ ಕಾಂಡವನ್ನು ಚುಚ್ಚಿ ಚುಚ್ಚಿ ನೀರು ಕುಡಿಯುತ್ತಿತ್ತು. ನೀರಿಲ್ಲದೇ ಬಸವಳಿದಿದ್ದ ಗುಲಾಬಿ ಗಿಡಕ್ಕೆ ನಿಧಿ ಸಿಕ್ಕಂತಾಯಿತು. ತಕ್ಷಣ ಕಳ್ಳಿಗಿಡಕ್ಕೆ ತಲೆಬಾಗಿ ಬೇಡಿಕೊಂಡಿತು 'ದಯವಿಟ್ಟು, ನನ್ನ ತಪ್ಪನ್ನು ಮನ್ನಿಸು. ತಿಳಿಯದೇ ಹಾಗೆಲ್ಲ ಮಾತನಾಡಿದೆ. ನಾನು ನನ್ನ ಸೊಕ್ಕನ್ನು ಇನ್ನು ಮುಂದೆ ಸುಟ್ಟು ಹಾಕುತ್ತೇನೆ. ಯಾರೂ ಕೀಳಲ್ಲ. ಯಾರೂ ಮೇಲಲ್ಲ ಎಂಬ ಅರಿವು ನನಗಾಗಿದೆ. ನೀರಿಲ್ಲದೇ ಸತ್ತು ಹೋಗುತ್ತಿದ್ದೇನೆ. ಒಂದಿಷ್ಟು ಕುಡಿಯಲು ನೀರುಕೊಟ್ಟು ನನ್ನನ್ನು ಬದುಕಿಸು. ನಿನ್ನ ಉಪಕಾರವನ್ನೆಂದೂ ಮರೆಯುವುದಿಲ್ಲ.'

ಕಳ್ಳಿಗಿಡಕ್ಕೆ ಕರುಣೆ ಬಂತು. 'ಚಿಂತಿಸಬೇಡ, ನೀರು ಕೊಡುತ್ತೇನೆ ಕುಡಿ. ಇನ್ನು ಮುಂದೆ ನಾವು ಸ್ನೇಹಿತರಾಗಿರೋಣ' ಎಂದು ನುಡಿದು ನೀರು ಕೊಟ್ಟಿತು. ಎರಡೂ ಗಿಡಗಳು ಮುಂದೆ ಸ್ನೇಹಿತರಾಗಿ ಅಕ್ಕ ಪಕ್ಕ ಬದುಕಿದವು.

■ ಆಧಾರ: **ಪ್ರಕಾಶ ಎಸ್. ಮನ್ನಂಗಿ**

---

# ತಪ್ಪನ್ನಳಿಸುವ ರಬ್ಬರ್



ಚಿತ್ರ: ವಿಜಯಕುಮಾರಿ ಆರ್.

ಒಮ್ಮೆ ಪೆನ್ಸಿಲ್, ತಾನು ಮಾಡಿದ ತಪ್ಪುಗಳನ್ನು ಸ್ವಲ್ಪವೂ ಬೇಸರಿಸದೆ ಸದಾ ನಗುನಗುತ್ತಲೇ ಅದನ್ನು ಅಳಿಸಿ ಹಾಕುವ ರಬ್ಬರನ್ನು ಕೇಳಿತು ಅಲ್ಲಾ, ನನ್ನ ತಪ್ಪನ್ನು ಅಳಿಸುವಾಗೆಲ್ಲಾ ನೀನು ಸ್ವಲ್ಪ ಸ್ವಲ್ಪವಾಗಿ ಕರಗಿಹೋಗುತ್ತಿದ್ದರೂ ಲೆಕ್ಕಿಸದೆ ಇರಲು ನಿನಗೆ ಹೇಗೆ ಸಾದ್ಯ? ಎಂದು ಪ್ರಶ್ನಿಸಿದಾಗ... ರಬ್ಬರ್ ಹೇಳಿತು ನೀನು ಅದರ ಬಗ್ಗೆ ಯೋಚಿಸಬೇಡ, ಅದು ನನ್ನ ಕರ್ತವ್ಯ, ನಾನು ಇರುವುದೇ ಈ ಕೆಲಸಕ್ಕಾಗಿ. ನಿನ್ನ ತಪ್ಪುಗಳನ್ನು ಅಳಿಸುವುದರಲ್ಲಿ ನನಗೆ ಸಂತೋಷ ಸಿಗುತ್ತದೆ. ನೀನು ಅದೇ ತಪ್ಪುಗಳನ್ನು ಮತ್ತೆ ಮಾಡದೇ ಜೀವನದಲ್ಲಿ ಮುಂದೆ ಬಂದರೆ ಅದಕ್ಕಿಂತ ಬೇರೆ ಆನಂದ ನನಗೆ ಯಾವುದರಲ್ಲೂ ದೊರಕುವುದಿಲ್ಲ ಎಂದಿತು.

ಆ ರಬ್ಬರ್ ಬೇರೆ ಯಾರೂ ಅಲ್ಲ, ಅದು ನಿಮ್ಮ ತಂದೆ ತಾಯಿಗಳೇ. ಅವರಿಗೆ ಎಷ್ಟೇ ಕಷ್ಟ ಬಂದರೂ ನಿಮ್ಮ ತಪ್ಪುಗಳನ್ನು ತಿದ್ದಿ ನಿಮ್ಮನ್ನು ಸರಿದಾರಿಯಲ್ಲಿ ನಡೆಸಲು ತಮ್ಮ ತನುಮನಗಳನ್ನು ಅರ್ಪಿಸಿ, ನೀವು ಸತ್ಪ್ರಜೆಯಾಗಿ ಸಮಾಜದಲ್ಲಿ ಒಳ್ಳೆಯ ಹೆಸರು ಪಡೆದರೆ ಅವರಿಗೆ ಅದಕ್ಕಿಂತ ಹೆಚ್ಚಿನ ಸಂತೋಷ ಬೇರೊಂದಿಲ್ಲ....! ನಿಮ್ಮ ಏಳಿಗೆಯನ್ನು ಕಂಡು ಹೊಟ್ಟೆಕಿಚ್ಚು ಪಡದೆ ಹರ್ಷಿಸುವ ಏಕಮಾತ್ರರು ನಿಮ್ಮನ್ನು ಹೆತ್ತವರು. ಅವರ ಮನಸ್ಸು ನೋಯಿಸದೆ ಹೇಳಿದ ಒಳಿತನ್ನು ಪಾಲಿಸುವುದೇ ನಿಮ್ಮಂತಹ ಮಕ್ಕಳ ಆದ್ಯ ಕರ್ತವ್ಯ..! ಮಾಡ್ತೀರಾ ತಾನೇ ?

■ **ಸಿ.ಆರ್. ಪುಷ್ಪ**